**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ 510/2024**

**ಪ್ರಾಸಾಃ 14 ಚಾಸಾಃ 17**

| | | |
|---|---|---|
| ಸಾಕ್ಷಿಯ ಹೆಸರು | : | ಶಾರದಾ |
| ಗಂಡನ ಹೆಸರು | : | ವಾಸು |
| ವಯಸ್ಸು | : | 59 ವರ್ಷ |
| ವೃತ್ತಿ | : | ಪಿ ಎಸ್ ಐ, ನೇತಾಜಿ ನಗರ ಪೋಲೀಸ್ ಠಾಣೆ |
| ವಾಸಸ್ಥಳ | : | ರಾಯಚೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.7.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

2024 ರಿಂದ ಫೆಬ್ರುವರಿ ಯಿಂದ ಜೂನ್ 2024 ರವರೆ ಬಳ್ಳಾರಿಯ ಕೌಲ್ ಬಜಾರ್ ಪೋಲೀಸ್ ಠಾಣೆಯಲ್ಲಿ ತನಿಖಾ ವಿಭಾಗದಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 30-3-2024 ರಂದು ರಾತ್ರಿ 7-00 ಗಂಟೆ ಸಮಯದಲ್ಲಿ ನಾನು ಠಾಣಾಧಿಕಾರಿಯಾಗಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ಹೇಳಿಕೆಯನು ಡೆದು ಅದರ ಆಧಾರದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆಃ 58/2022 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡೆ. ಪ್ರಥಮ ವರ್ತಮಾನ ವರದಿಯನ್ನು ಈಗ ಗುರುತಿಸುತ್ತಿದ್ದೇನೆ. ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯ ಬಗ್ಗೆ ಕಡತವನ್ನು ಚಾಸಾ 18 ರವರಿಗೆ ವಹಿಸಿಕೊಟ್ಟೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ವಕೀಲರಿಂದಃ</u>**

ನಿಪಿ-1 ದೂರನ್ನು ನಾನು ಠಾಣೆಯಲ್ಲೇ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಅವರು ಬೆರಳಚ್ಚು ಮಾಡಿದ್ದ ಹೇಳಿಕೆ ಸಲ್ಲಿಸಿದ್ದರು. ನಾನು ಕೇಸಿಗೋಸ್ಕರ ಅದನ್ನು ತಯಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದೂರಿನ ಜೊತೆ ಗಾಯದ ಪ್ರಮಾಣ ಪತ್ರ ಮತ್ತು ಎಂ ಎಲ್ ಸಿ ಸಲ್ಲಿಸಿದ್ದರು. ಜಾತಿ ದೃಢೀಕರಣ ಪತ್ರ ಸಲ್ಲಿಸಿಲ್ಲ. 8 ತಿಂಗಳ ನಂತರ ದೂರು ನೀಡಿದ್ದಾರೆ ಎಂದರೆ ಸರಿ. ಅಷ್ಟು ವಿಳಂಬ ಆಗಲು ಸಕಾರಣ ತೋರಿಸಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಈ ಸಾಕ್ಷ್ಯವನ್ನು ವಿ.ಸಿ ಮೂಲಕ ರೆಕಾರ್ಡಿಂಗ್ ಮಾಡಲಾಗಿದ್ದು ಸಾಕ್ಷಿದಾರರು ಹೇಳಿದಂತೆ ಯತಾವತ್ತಾಗಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು. ಶ್ರೀ ಮಲ್ಲಿಕಾರ್ಜುನ ರವರು ಟೆಕ್ನಿಷಿಯನ್ ಆಗಿ ಸಾಕ್ಷಿಯ ಪಾಯಿಂಟ್‌ನಲ್ಲಿದ್ದು ಶ್ರೀಮತಿ ನಾಗಶ್ರೀ ರವರು ಟೆಕ್ನಿಷಿಯನ್ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ).

ಓ.ಹೇ.ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.